ಯಗಚಿ ಯೋಜನೆಯಿಂದ ನೀರಾವರಿ ಒದಗಿಸುವುದು

782(1104) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಯಗಚಿ ಯೋಜನೆಯಿಂದ ಬೇಲೂರು ತಾಲ್ಲೂಕಿನ ಮಾದಿಹಳ್ಳಿ ಹಾಗೂ ಹಳೇಬೀಡು ಹೋಬಳಿಗೆ ನೀರಾವರಿ ಹಾಗೂ ಕುಡಿಯುವ ನೀರನ್ನು ಒದಗಿಸಲು ಏತ ನೀರಾವರಿ ಯೋಜನೆಯು ಮಂಜೂರಾಗಿರುವುದು ನಿಜವೇ ;

ಆ) ಮಂಜೂರಾಗಿದ್ದಲ್ಲಿ ಯಾವಾಗ ಮಂಜೂರಾಗಿದೆ (ವಿವರ ನೀಡುವುದು), ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ;

ಇ) ಸದರಿ ಯೋಜನೆಗೆ ಮಾಡಿದ ಅನುದಾನ ಹಾಗೂ ವೆಚ್ಚ ಎಷ್ಟು (ವಿವರ ನೀಡುವುದು) ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಮಾದಿಹಳ್ಳಿ ಹಾಗೂ ಹಳೇಬೀಡು ಹೋಬಳಿಯ ಅಭಾವ ಪೀಡಿತ ಹಳ್ಳಿಗಳಿಗೆ ನೀರಾವರಿ ಹಾಗೂ ಕುಡಿಯುವ ನೀರು ಒದಗಿಸುವ ಸಲುವಾಗಿ ಯಗಚಿ ಯೋಜನೆಯಡಿಯಲ್ಲಿ ಹಳೇಬೀಡು – ಮಾದಿಹಳ್ಳಿ ಏತ ನೀರಾವರಿ ಯೋಜನೆಗೆ ಸರ್ಕಾರದಿಂದ ದಿನಾಂಕ : 19.10.2002 ರಲ್ಲಿ ಆಡಳಿತಾತ್ಮಕ ಅನುಮೋದನೆಯಾಗಿರುತ್ತದೆ.

ಆ) ಆ ಭಾಗದ ಕುಡಿಯುವ ನೀರಿನ ಭವಣೆಯನ್ನು ನಿವೇದಿಸಿ ಜನ ಪ್ರತಿನಿಧಿಗಳ ಮುಖಾಂತರ ಬಂದ ಮನವಿಯ ಮೇರೆಗೆ ಇದನ್ನು ಕುಡಿಯುವ ನೀರಿನ ಯೋಜನೆಯ ಸಲುವಾಗಿ ಕೆರೆ ತುಂಬಿಸುವ ಯೋಜನಾ ವರದಿಯ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು.

ಇ) ಕಾವೇರಿ ನೀರಾವರಿ ನಿಗಮಕ್ಕೆ ನೀಡುವ ಒಟ್ಟಾರೆ ಅನುದಾನದಲ್ಲಿ ಈ ಯೋಜನೆಗೆ ಅನುದಾನವನ್ನು ನಿಗದಿ ಪಡಿಸಿಕೊಳ್ಳಲಾಗುವುದು. ಈ ಯೋಜನೆಯ ಕಾಮಗಾರಿಗೆ ಈವರೆಗೂ ಯಾವುದೇ ವೆಚ್ಚವಾಗಿರುವುದಿಲ್ಲ.